ಡನ್ನೋನ ಸಾಹಸ ಕಥೆ

ನಿಕೋಲಾಯ್ ನೋಸೊವ್

04



ಕವಿ ಡನ್ನೋ





ಡನ್ನೋ ಅವರ ಸಾಹಸಗಳು

ನಿಕೊಲಾಯ್ ನೋಸೊವ್

04

ಕವಿ ಡನ್ನೋ

ರೇಖಾಚಿತ್ರ: ಬೋರಿಸ್ ಕಲಾಶಿನ್

ಕನ್ನಡಕ್ಕೆ ಪ್ರಭಾಕರ ನಾನಾವಟಿ







ಡನ್ನೋ ಕಲಾವಿದನಾಗಲು ಮಾಡಿದ ಪ್ರಯತ್ನಗಳಿಂದ ಸೋತ ಮೇಲೆ ಅವನು ಕವಿಯಾಗಲು ತೀರ್ಮಾನಿಸಿದನು. ಡ್ಯಾಂಡಿಲಿಯನ್ ಸ್ಟ್ರೀಟದಲ್ಲಿ ವಾಸಿಸುತ್ತಿದ್ದ ಒಬ್ಬ ಕವಿಯ ಬಗ್ಗೆ ಅವನಿಗೆ ಗೊತ್ತಿತ್ತು. ಆ ಕವಿಯ ನಿಜವಾದ ಹೆಸರು ಟರ್ನಿಪ್ಸ್. ಆದರೆ ಎಲ್ಲ ಕವಿಗಳೂ ಸುಂದರವಾದ ಕಾವ್ಯನಾಮಗಳನ್ನು ಹೊಂದಲು ಇಷ್ಟಪಡುವುದರಿಂದ, ಅವನು ತನಗಾಗಿ ಮತ್ತೊಂದು ಹೆಸರನ್ನು ಆರಿಸಿಕೊಂಡಿದ್ದನು. ಅವನು ತನ್ನನ್ನು 'ಪೋಸಿ' ಎಂದು ಕರೆದುಕೊಂಡನು.
ಒಂದು ದಿನ ಡನ್ನೋ ಪೋಸಿಯನ್ನು ಭೇಟಿಯಾಗಿ ಅವನಿಗೆ ಹೇಳಿದನು: "ಪೋಸಿ, ನನಗೆ ಕವಿತೆ ಬರೆಯುವುದನ್ನು ಕಲಿಸು. ನಾನು ಕವಿಯಾಗಬೇಕೆಂದು ಬಯಸುತ್ತೇನೆ."
"ನಿನ್ನಲ್ಲಿ ಪ್ರತಿಭೆ ಇದೆಯೇ?" ಎಂದು ಪೋಸಿ ಕೇಳಿದನು.
"ಖಂಡಿತ ಇದೆ. ನಾನು ತುಂಬಾ ಪ್ರತಿಭಾವಂತ," ಎಂದು ಡನ್ನೋ ಹೆಮ್ಮೆಯಿಂದ ಹೇಳಿದನು.

“ಅದನ್ನು ನೋಡುವಾ, ಪ್ರಾಸ ಹೇಗೆ ಮಾಡುತ್ತಾರೆ ಎಂಬುದು ನಿನಗೆ ಗೊತ್ತೇ?” ಎಂದು ಪೋಸಿ ಕೇಳಿದನು.

“ಪ್ರಾಸ? ಅದು ಏನು?”

“ಒಂದೇ ಧ್ವನಿಯಲ್ಲಿ ಕೊನೆಗೊಳ್ಳುವ ಪದಗಳನ್ನು ಹುಡುಕಿ ಪ್ರಾಸ ಮಾಡುತ್ತಾರೆ. ಉದಾಹರಣೆಗೆ, ‘ಟಿಕಲ್, ಪಿಕಲ್’, ‘ಬೆರಿ, ಚೆರಿ’. ಅರ್ಥವಾಯಿತೇ?”

“ಹೌದು.”

“ಹಾಗಾದರೆ ‘ವೇಟರ್’ಗೆ ಒಂದು ಪ್ರಾಸ ಹೇಳು.”

“‘ಮಿಸ್ಟರ್’,” ಎಂದು ಡನ್ನೋ ಹೇಳಿದ.

“ಮೂರ್ಖನೆ, ಮಿಸ್ಟರ್’ಗೆ ‘ವೇಟರ್’ ಜೊತೆ ಪ್ರಾಸ ಆಗುವುದಿಲ್ಲ.” ಎಂದು ಪೋಸಿ ಹೇಳಿದನು.

“ಯಾಕೆ ಆಗುವುದಿಲ್ಲ?” ಎಂದು ಡನ್ನೋ ಕೇಳಿದನು. “ಎರಡೂ ಒಂದೇ ಧ್ವನಿಯಲ್ಲಿ ಕೊನೆಗೊಳ್ಳುತ್ತವಲ್ಲ.”

“ಕೇವಲ ಕೊನೆಯ ಧ್ವನಿಯಲ್ಲ - ಅದರ ಹಿಂದಿನ ಧ್ವನಿಯೂ ಕೂಡ ಪ್ರಾಸದಲ್ಲಿರಬೇಕು. ಉದಾಹರಣೆಗೆ: ‘ಮದರ್, ಬ್ರದರ್’; ‘ಸಿಂಪಲ್, ಪಿಂಪಲ್’; ‘ಟೆಂಡರ್, ಫೆಂಡರ್’.”







“ಓಹ್, ಈಗ ಅರ್ಥವಾಯಿತು!” ಎಂದು ಡನ್ನೋ ಹೇಳಿದನು. “ಮದರ, ಬ್ರದರ;
ಸಿಂಪಲ್, ಪಿಂಪಲ್; ಟೆಂಡರ್, ಫೆಂಡರ್. ಇದು ತುಂಬಾ ಮೋಜು!”
“ಹಾಗಾದರೆ ‘ಸೀಜರ್ಸ’ಗೆ ಒಂದು ಪ್ರಾಸ ಹೊಂದುವ ಪದ ಹೇಳು,” ಎಂದು
ಪೋಸಿ ಕೇಳಿದನು.
“ಜಿಜರ್ಸ್,” ಎಂದು ಡನ್ನೋ ಹೇಳಿದನು.
“‘ಜಿಜರ್ಸ್’ ಅಂದರೆ ಏನು? ಜಿಜರ್ಸ್ ಎನ್ನುವ ಪದವೇ ಇಲ್ಲ.” ಎಂದು ಪೋಸಿ
ಹೇಳಿದನು.
“ಇಲ್ಲವೇ?”
“ಖಂಡಿತ ಇಲ್ಲ.”
“ಹಾಗಾದರೆ ‘ಫಿಜರ್ಸ್’.”
“‘ಫಿಜರ್ಸ್’ ಅಂದರೆ ಏನು?” ಎಂದು ಪೋಸಿ ಕೇಳಿದನು.
“ಫಿಜರ್ಸ್? ಅಂದರೆ ಫಿಜ್ ಮಾಡುವ ವಸ್ತುಗಳು.”
“ಅದನ್ನು ನೀನೇ ಈಗ ಕಟ್ಟಿ ಹೇಳುತ್ತಿರುವಿ. ಅಂಥ ಪದವೇ ಇಲ್ಲ.
ನೀನು ನಿಜವಾದ ಪದಗಳನ್ನೇ ಆಯ್ಕೆ ಮಾಡಬೇಕು;
ಮನಸ್ಸಿಗೆ ಬಂದ ವಿಚಿತ್ರ ಪದಗಳನ್ನು ಹಾಗೇ ಕಟ್ಟಿ ಹೇಳಬಾರದು.”
ಎಂದು ಪೋಸಿ ಹೇಳಿದನು.
“ಹಾಗಾದರೆ ನನಗೆ ನಿಜವಾದ ಪದ ಸಿಗದಿದ್ದರೆ?”
“ಅದರರ್ಥ ನಿನ್ನಲ್ಲಿ ಕಾವ್ಯ ಪ್ರತಿಭೆಯೇ ಇಲ್ಲ.”
“ಸರಿ, ಹಾಗಾದರೆ ‘ಕತ್ತರಿ’ಗೆ ನೀನೇ ಒಂದು
ಪ್ರಾಸ ಹೊಂದುವ ಪದ ಹೇಳು,” ಎಂದು ಡನ್ನೋ ಕೇಳಿದನು.
“ಒಂದು ನಿಮಿಷ.”
ಪೋಸಿ ಕೋಣೆಯ ಮಧ್ಯದಲ್ಲಿ ನಿಂತು,
ತನ್ನ ಕೈಗಳನ್ನು ಎದೆಯ ಮೇಲೆ ಮಡಚಿಕೊಂಡು,
ತಲೆಯನ್ನು ಒಂದು ಬದಿಗೆ ಓರೆಯಾಗಿ ತಿರುಗಿಸಿ
ಯೋಚಿಸಲು ಶುರು ಮಾಡಿದನು.





ನಂತರ ಅವನು ತನ್ನ ತುಟಿಯನ್ನು ಕೈಗಳಲ್ಲಿ ಹಿಡಿದು ನೆಲದತ್ತ ನೋಡುತ್ತ ಯೋಚಿಸಿದನು. ಇದೆಲ್ಲವನ್ನೂ ಮಾಡಿದ ನಂತರ ಅವನು ಅತ್ತಿತ್ತ ನಡೆಯಲು ಆರಂಭಿಸಿ, ತನ್ನೊಳಗೇ ಗೊಣಗಲು ಶುರುಮಾಡಿದನು:

"ಕತ್ತರಿ, ಮತ್ತರಿ, ಬತ್ತರಿ, ನತ್ತರಿ, ರತ್ತರಿ...'

ಅವನು ಬಹಳ ಹೊತ್ತಿನವರೆಗೆ ಗೊಣಗುತ್ತಲೇ ಇದ್ದನು. ಕೊನೆಗೆ "ಅಯ್ಯೋ, ಇದೇನು ಕಿರಿಕಿರಿ! ಆ ಪದಕ್ಕೆ ಹೊಂದುವ ಪ್ರಾಸವೇ ಇಲ್ಲವಲ್ಲ!" ಎಂದು ಹೇಳಿದನು.

"ನೋಡಿದಿಯಾ!" ಎಂದು ಡನ್ನೋ ಹೆಮ್ಮೆಯಿಂದ ಹೇಳಿದ. "ನೀನೇ ನನಗೆ ಪ್ರಾಸವಿಲ್ಲದ ಪದ ಕೊಟ್ಟು, ನಂತರ ನನಗೆ ಪ್ರತಿಭೆಯೇ ಇಲ್ಲ ಎಂದೆನ್ನುತ್ತೀ."

"ಇರಬಹುದು, ಆದರೆ ದಯವಿಟ್ಟು ನನ್ನನ್ನು ಒಬ್ಬಂಟಿಗನಾಗಿರಲು ಬಿಡು. ನನ್ನ ತಲೆ ಸುತ್ತುತ್ತಿದೆ. ಪ್ರಾಸ ಹೊಂದಿ ಅರ್ಥಪೂರ್ಣವಾಗಿರುವ ಯಾವುದನ್ನಾದರೂ ಬರೆ. ಅದೇ ಕವಿತೆಯಾಗುತ್ತದೆ." ಎಂದು ಪೋಸಿ ಹೇಳಿದನು.

"ಅಷ್ಟು ಸುಲಭವೇ?" ಡನ್ನೋ ಕೇಳಿದನು.

"ಹೌದು, ಅದಕ್ಕೆ ಬೇಕಾಗಿರುವುದು ಪ್ರತಿಭೆ ಮಾತ್ರ."

ಡನ್ನೋ ಮನೆಗೆ ಹೋದನು. ಮನೆಗೆ ತಲುಪಿದ ತಕ್ಷಣವೇ ಕುಳಿತು ಕವಿತೆ ಬರೆಯಲು ಆರಂಭಿಸಿದನು.

ಇಡೀ ದಿನ ಅವನು ಅತ್ತಿತ್ತ ನಡೆಯುತ್ತ, ಕೆಲವೊಮ್ಮೆ ನೆಲದತ್ತ, ಮತ್ತೊಮ್ಮೆ ಮೇಲ್ಛಾವಣಿಯತ್ತ ನೋಡುತ್ತ, ತನ್ನ ತುಟಿಯನ್ನು ಕೈಗಳಲ್ಲಿ ಹಿಡಿದು, ತನ್ನೊಳಗೇ ಗೊಣಗುತ್ತಲೇ ಇದ್ದನು. ಕೊನೆಗೆ, ಕವಿತೆಗಳು ಸಿದ್ಧವಾದವು.

“ಎಲ್ಲರೂ ಕೇಳಿ! ನಾನು ಕೆಲವು ಕವಿತೆಗಳನ್ನು ಬರೆದಿದ್ದೇನೆ.” ಎಂದು ಅವನು ಎಲ್ಲರನ್ನು ಕರೆದು ಹೇಳಿದನು
“ಬಹಳ ಚೆನ್ನಾಗಿದೆ! ನಿನ್ನ ಕವಿತೆಗಳು ಯಾವುದರ ಬಗ್ಗೆ?” ಎಂದು ಅವನ ಸ್ನೇಹಿತರು ಕೇಳಿದರು.
“ನಿಮ್ಮ ಬಗ್ಗೆ, ಮೊದಲ ಕವಿತೆ ಡೂನೋ ಬಗ್ಗೆ: ” ಎಂದು ಡನ್ನೋ ಹೇಳಿದನು.
“ಡೂನೋ ಒಂದು ದಿನ ನಡೆಯಲು ಹೊರಟನು.
ತನ್ನ ದಾರಿಯಲ್ಲಿ ನಿಂತಿದ್ದ ಒಂದು ಕುರಿಮರಿಯ ಮೇಲೆ ಜಿಗಿದನು.“
“ಇದೇನು? ನಾನು ಯಾವಾಗ ಕುರಿಮರಿಯ ಮೇಲೆ ಜಿಗಿದಿದ್ದೇನೆ?” ಎಂದು ಡೂನೋ ಒದರಿದನು.





“ಅದು ಕೇವಲ ಪ್ರಾಸಕ್ಕಾಗಿ ಮಾತ್ರ,” ಎಂದು ಡನ್ನೋ ವಿವರಿಸಿದನು.
“ಮತ್ತು ಪ್ರಾಸಕ್ಕಾಗಿ ನನ್ನ ಬಗ್ಗೆ ಎಲ್ಲ ತರಹದ ಸುಳ್ಳುಗಳನ್ನು ಹೆಣೆಯಬೇಕೆಂದು ನೀನು ನಿರ್ಧರಿಸಿದ ಹಾಗೆ ಕಾಣುತ್ತದೆ.” ಎಂದು ಕೋಪೋದ್ರಿಕ್ತನಾದ ಡೂನೋ ಕೇಳಿದನು.
“ಹೌದು, ಹಾಗೆಂದು ತಿಳಿ. ನಿಜವಾದ ವಿಷಯಗಳನ್ನು ನನಗೆ ಬರೆಯಲು ಆಗುತ್ತಿಲ್ಲ.” ಎಂದು ಡನ್ನೋ ಹೇಳಿದನು.
“ಇನ್ನೊಮ್ಮೆ ಹಾಗೆ ಮಾಡಿ ನೋಡು!” ಎಂದು ಡೂನೋ ಎಚ್ಚರಿಸಿದನು.
“ಬೇರೆಯವರ ಬಗ್ಗೆಯೂ ಸುಳ್ಳುಗಳನ್ನು ಬರೆದಿದ್ದೀಯಾ?” ಅವನು ಕೇಳಿದನು
“ಸ್ವಿಫ್ಟಿ ಬಗ್ಗೆಯೂ ಒಂದು ಕವಿತೆ ಇದೆ:
ಹಸಿದ ಸ್ವಿಫ್ಟಿ, ಕೇಳಿದಳು,
ತಣ್ಣನೆಯ ಕಬ್ಬಿಣದ ತುಂಡನ್ನು ನುಂಗಿದಳು.”



“ಕೇಳಿದಿರಾ? ಅವನು ನನ್ನ ಬಗ್ಗೆ ಏನು ಹೇಳುತ್ತಿದ್ದಾನೆಂದು ಕೇಳಿದಿರಾ? ” ಎಂದು ಸ್ವಿಫ್ಟಿ ಕೂಗಿದಳು.
ನನ್ನ ಜೀವನದಲ್ಲಿ ನಾನು ಎಂದಿಗೂ ತಣ್ಣನೆಯ ಕಬ್ಬಿಣವನ್ನು ತಿಂದಿಲ್ಲ!” ಎಂದು ಸ್ವಿಫ್ಟಿ ಹೇಳಿದಳು.
“ಒದರಬೇಡ. ಪ್ರಾಸಕ್ಕಾಗಿ ಮಾತ್ರ ಅದು ತಣ್ಣಗಿತ್ತು ಎಂದು ಹೇಳಿದೆ.” ಡನ್ನೋನ ಉತ್ತರ.
“ಆದರೆ ನಾನು ಬಿಸಿಯಾದ ಕಬ್ಬಿಣವನ್ನೂ ಕೂಡ ಎಂದಿಗೂ ತಿಂದಿಲ್ಲ,” ಎಂದು ಸ್ವಿಫ್ಟಿ ಉತ್ತರಿಸಿದಳು.
“ಸರಿ, ನೀನು ಬಿಸಿಯಾದದ್ದನ್ನು ತಿಂದೆ ಎಂದು ನಾನು ಹೇಳಲೇ ಇಲ್ಲ. ಹಾಗಿದ್ದರೆ ನೀನು ಇಷ್ಟು ಉದ್ರೇಕಗೊಳ್ಳುವ ಅಗತ್ಯವೇ ಇಲ್ಲ,” ಎಂದು ಡನ್ನೋ ಹೇಳಿದನು.
“ಈಗ ಪರಹ್ಯಾಪ್ಸ್ ಬಗ್ಗೆ ನಾನು ಬರೆದಿರುವ ಕವಿತೆಯನ್ನು ಕೇಳು:
ತಲೆದಿಂಬಿನ ಕೆಳಗೆ ಪರಹ್ಯಾಪ್ಸ್ ಕಂಡನು
ಅರ್ಧ ಪೌಂಡ್ ತೂಕದ ಒಂದು ಕೇಕ್.”





ಪರಹ್ಯಾಪ್ಸ್ ತನ್ನ ಹಾಸಿಗೆಯ ಕಡೆಗೆ ಓಡಿ ಹೋಗಿ, ತಲೆದಿಂಬಿನ ಕೆಳಗೆ ನೋಡಿದನು.
"ನನ್ನ ತಲೆದಿಂಬಿನ ಕೆಳಗೆ ಕೇಕ್ ಇಲ್ಲ," ಎಂದು ಹೇಳಿದನು.
"ನಿನಗೆ ಕವಿತೆ ಅರ್ಥವಾಗುವುದಿಲ್ಲ," ಎಂದು ಡನ್ನೋ ಹೇಳಿದನು.
"ಖಂಡಿತವಾಗಿಯೂ ಅಲ್ಲಿ ಕೇಕ್ ಇಲ್ಲ. ಪ್ರಾಸಕ್ಕಾಗಿ ಹಾಗೆ ಹೇಳಿದೆ ಅಷ್ಟೇ. ಡಾ. ಪಿಲ್‌ಮನ್ ಅವರ ಬಗ್ಗೆ ಕೂಡ ನಾನು ಒಂದು ಕವಿತೆ ಬರೆದಿದ್ದೇನೆ."
"ಸ್ನೇಹಿತರೇ, ಇದನ್ನು ನಾವು ಇಲ್ಲಿಗೇ ನಿಲ್ಲಿಸಬೇಕು," ಎಂದು ಡಾ. ಪಿಲ್‌ಮನ್ ಹೇಳಿದನು.
"ಅವನು ನಮ್ಮ ಬಗ್ಗೆ ಸುಳ್ಳುಗಳನ್ನು ಹೇಳುತ್ತಲೇ ಇದ್ದಾಗ ನಾವು ಸುಮ್ಮನೆ ನೋಡುತ್ತ ನಿಲ್ಲಬೇಕೇ?"
"ಇಲ್ಲ, ಬೇಡ!" ಎಂದು ಎಲ್ಲರೂ ಒಪ್ಪಿದರು. "ಇನ್ನು ಮುಂದೆ ಇದನ್ನು ನಾವು ಸಹಿಸುವುದಿಲ್ಲ! ಅವು ಕವಿತೆಗಳೇ ಅಲ್ಲ. ಅವನು ನಮ್ಮ ಬಗ್ಗೆ ಕೇವಲ ಹಾಸ್ಯಾಸ್ಪದ ಮಾತುಗಳನ್ನು ಹೇಳುತ್ತಿದ್ದಾನೆ."
ಆದರೆ ಡೂನೋ, ಸ್ವಿಫ್ಟಿ ಮತ್ತು ಪರಹ್ಯಾಪ್ಸ್ ಮಾತ್ರ ಉಳಿದ ಕವಿತೆಗಳನ್ನೂ ಕೇಳಲು ಬಯಸಿದರು.



' ಅವನು ಅವುಗಳನ್ನು ಓದಲಿ,' ಅವರು ಪ್ರಶ್ನಿಸಿದರು.

'ಅವನು ನಮ್ಮ ಬಗ್ಗೆ ಓದಿದ್ದರೆ, ಅವನು ನಿಮ್ಮ ಬಗ್ಗೆ ಏಕೆ ಓದಬಾರದು ?'

'ನಮಗೆ ಅದು ಬೇಡ! ನಾವು ಕೇಳುವುದಿಲ್ಲ!' ಎಂದು ಇತರರು ಕೂಗಿದರು.

'ಸರಿ, ನೀವು ಕೇಳಲು ಬಯಸದಿದ್ದರೆ, ನಾನು ಹೋಗಿ ನೆರೆಹೊರೆಯವರಿಗೆ ಓದಿ ಹೇಳುತ್ತೇನೆ ' ಎಂದು ಡನ್ನೋ ಹೇಳಿದರು.

ನೆರೆಹೊರೆಯವರ ಮುಂದೆ ನಮ್ಮನ್ನು ಅವಮಾನಿಸುವೆಯಾ ! ಹಾಗೆ ಮಾಡಿದರೆ, ನೀನುಮನೆಗೆ ಬರದಿರುವುದು ಉತ್ತಮ!'

ನನ್ನ ಮೇಲೆ ಕೋಪಗೊಳ್ಳಬೇಡಿ .'

ಅವನು ಆ ಮೇಲೆ "ಇನ್ನು ಮುಂದೆ ಎಂದಿಗೂ ಕವಿತೆ ಬರೆಯುವುದಿಲ್ಲ." ಎಂದು ನಿರ್ಧರಿಸಿದನು.







